# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಗೊಲ್ಲಾಳಪ್ಪಾ, ಅಧ್ಯಕ್ಷರು, ಮಂದೇವಾಲ ಗ್ರಾಮ ಪಂಚಾಯಿತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ ಜಿಪಕ.ಪಕಾ.ಗ್ರಾಪಂ/39/1/2015-16/529 ದಿನಾಂಕ:26.09.2016
2. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:892:ಗ್ರಾಪಂಅ:2016, ದಿನಾಂಕ:.26.10.2016 ರ ಕಾರಣ ಕೇಳುವ ನೋಟಿಸ್ಸು.
3. ಶ್ರೀ ಗೊಲ್ಲಾಳಪ್ಪಾ, ಅಧ್ಯಕ್ಷರು, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:14.11.2016.
4. ವಿಚಾರಣಾ ತಿಳುವಳಿಕೆ ಪತ್ರ ದಿನಾಂಕ:25.01.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ದಿನಾಂಕ:26.09.2016 ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕಲಬುರಗಿ ಜಿಲ್ಲೆ, ರವರ ಪತ್ರದಲ್ಲಿ ಮಂದೇವಾಲ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಗೊಲ್ಲಾಳಪ್ಪಾರವರ ವಿರುದ್ದ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ ಕಲಬುರಗಿ ರವರು ಪ್ರಸ್ತಾವನೆಯಲ್ಲಿ ಜೇವರ್ಗಿ ತಾಲ್ಲೂಕಿನ ಮಂದೇವಾಲ ಗ್ರಾಮ ಪಂಚಾಯಿತಿ ಕಾರ್ಯಾಲಯದ ಸವಿಸ್ತಾರ ತನಿಖೆಯನ್ನು ಜರುಗಿಸಿ ವರದಿ ಸಲ್ಲಿಸಿದ್ದು, ವರದಿಯಲ್ಲಿನ ಅಂಶಗಳು ಈ ಕೆಳಗಿನಂತಿವೆ.

1) ಶ್ರೀ ಗೊಲ್ಲಳಪ್ಪನವರು ದಿನಾಂಕ:30.06.2015 ರಂದು ಮಂದೇವಾಲ ಗ್ರಾಮ ಪಂಚಾಯತ್ ಚುನಾಯಿತ ಅಧ್ಯಕ್ಷರಾಗಿದ್ದು, ಈ ಅವಧಿಯಲ್ಲಿ ದಿನಾಂಕ:30.06.2015 ರಂದು ಕೇವಲ ಒಂದೇ ಒಂದು ಸಾಮಾನ್ಯ ಸಭೆ ಜರುಗಿಸಿರುತ್ತಾರೆ. ಈ ಸಭೆಯಲ್ಲಿ 2014-15 ನೇ ಸಾಲಿನಲ್ಲಿ 13 ನೇ ಹಣಕಾಸು ಯೋಜನೆಯಡಿ ಕುಡಿಯುವ ನೀರು ನಿರ್ವಹಣೆಗಾಗಿ ರೂ.1.80 ಲಕ್ಷ ಮತ್ತು ಇತರೆ ಕಾಮಗಾರಿಗಳಿಗಾಗಿ ರೂ.2.34 ಲಕ್ಷಗಳ ಕ್ರಿಯಾ ಯೋಜನೆಯನ್ನು ಅನುಮೋದಿಸಿರುತ್ತಾರೆ. ಹಾಗೂ 2015-16 ನೇ ಸಾಲಿನಲ್ಲಿ ರೂ.10.41 ಲಕ್ಷಗಳ ಕ್ರಿಯಾ ಯೋಜನೆಯನ್ನು ಮೇಲಾಧಿಕಾರಿಗಳಿಂದ ಅನುಮೋದನೆ ಪಡೆದಿರುತ್ತಾರೆ. ಸರ್ಕಾರದ ಮಾರ್ಗಸೂಚಿಯನ್ವಯ ಪ್ರತಿ ತಿಂಗಳಿಗೊಮ್ಮೆ ಸಭೆಯನ್ನು ಜರುಗಿಸಬೇಕಾಗಿರುತ್ತದೆ. ಆದರೆ ಅಧ್ಯಕ್ಷರು ಒಂದು ವರ್ಷದ ಅವಧಿಯಲ್ಲಿ ಕೇವಲ ಒಂದೇ ಒಂದು ಸಭೆಯನ್ನು ಜರುಗಿಸದಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ.

2) ಸದರಿ ಅಧ್ಯಕ್ಷರು ನಗದು ಪುಸ್ತಕದನ್ವಯ ಒಟ್ಟು 24 ಚೆಕ್‌ಗಳನ್ನು ಸಹಿ ಮಾಡಿರುವುದು ಕಂಡು ಬಂದಿರುತ್ತದೆ ಹಾಗೂ ಅವುಗಳ ಒಟ್ಟು ಮೊತ್ತ ರೂ.5,96,841/- ಗಳು ಆಗಿರುತ್ತದೆ. ಈ 24 ಚೆಕ್‌ಗಳ ಪೈಕಿ ಕ್ರಮ ಸಂ. 16 ರಿಂದ 24 ರ ವರೆಗಿನ ಒಟ್ಟು 9 ಚೆಕ್‌ಗಳ ಒಟ್ಟು ಮೊತ್ತ ರೂ. 1,80,219/- ಗಳನ್ನು ಪಾವತಿಸಿರುವುದಕ್ಕೆ ಯಾವುದೇ ಬಿಲ್‌ಗಳು ಮತ್ತು ದಾಖಲಾತಿಗಳು ಲಭ್ಯವಿರುವುದಿಲ್ಲ.

3) ಕ್ರಮ ಸಂ. 1 ರಿಂದ 4 ರವರೆಗಿನ ಚೆಕ್‌ಗಳ ಮೊತ್ತ ಒಟ್ಟು ರೂ. 88,006/- ಗಳನ್ನು ಶ್ಯಾಮ ಎಲೆಕ್ಟ್ರಿಕಲ್ ರವರಿಗೆ ನೀಡಲಾಗಿದ್ದು, ಈ ಕುರಿತು ಯಾವುದೇ ಕೊಟೇಶನ್ ಕರೆದಿರುವುದಿಲ್ಲ. ಹಾಗೂ ಕ್ರಮ ಸಂಖ್ಯೆ 10-15 ರ ವರೆಗಿನ ಚೆಕ್‌ಗಳ ಒಟ್ಟು ಮೊತ್ತ ರೂ 1,37,611/- ಗಳನ್ನು ಯಾವುದೇ ಕೊಟೇಷನ್ ಕರೆಯದೆ ನೇರವಾಗಿ ವಿಶಾಲ ಎಲೆಕ್ಟ್ರಿಕಲ್ ರವರಿಗೆ ನೀಡಲಾಗಿರುತ್ತದೆ.

4) 2014-15 ನೇ ಸಾಲಿನಲ್ಲಿ ಬಿ.ಆರ್.ಜಿ.ಎಫ್. ಯೋಜನೆಯಡಿ ಬಿಡುಗಡೆಯಾದ ಅನುದಾನ ರೂ.4,56,000/- ಲಕ್ಷಗಳನ್ನು ಬಳಕೆ ಮಾಡಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

5) 2015-16 ನೇ ಸಾಲಿನಲ್ಲಿ 14 ನೇ ಹಣಕಾಸು ಆಯೋಗ ಯೋಜನೆಯಡಿ ಸರ್ಕಾರದಿಂದ ದಿನಾಂಕ:30.12.2015, 05.02.2016 ಮತ್ತು 06.05.2016 ರಂದು ಮೂರು ಕಂತುಗಳಲ್ಲಿ ಒಟ್ಟು ರೂ. 12,72,613/- ಲಕ್ಷಗಳ ಅನುದಾನ ಬಿಡುಗಡೆಯಾಗಿರುವುದು ಬ್ಯಾಂಕ್ ಸ್ಟೇಟ್‌ಮೆಂಟ್ ಪ್ರಕಾರ ಕಂಡು ಬಂದಿರುತ್ತದೆ. ಈ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಿರುವುದಿಲ್ಲ.

6) ದಿನಾಂಕ:13.06.2016 ರಂದು ತಹಸೀಲ್ದಾರರು ಜೇವರ್ಗಿ ಹಾಗೂ ತಾಲ್ಲೂಕು ಪಂಚಾಯತ್ ಅಧಿಕಾರಿ ಜೇವರ್ಗಿ ರವರು ಇಂದಿರಾ ನಗರ ತಾಂಡಾವನ್ನು ಮಂದೇವಾಲ ಗ್ರಾಮ ಪಂಚಾಯಿತಿ ಸೇರ್ಪಡೆ ಕುರಿತು ಗ್ರಾಮ ಸಭೆ ನಡೆಸಿರುತ್ತಾರೆ, ಇದನ್ನು ಅಧ್ಯಕ್ಷರು ಹಾಗೂ ಸಂಬಂಧಪಟ್ಟವರೆಲ್ಲರು ಒಪ್ಪಿಕೊಂಡಿರುತ್ತಾರೆ.

7) ಮಂದೇವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರು ನಿಗಧಿ ಪಡಿಸಿದ ಸಭೆಗಳನ್ನು ಜರುಗಿಸಿರುವುದಿಲ್ಲ, ಬಿ.ಆರ್.ಜಿ.ಎಫ್. ಯೋಜನೆಯಡಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಬಳಕೆ ಮಾಡಿರುವುದಿಲ್ಲ, 9 ಚೆಕ್‌ಗಳನ್ನು ನೀಡಿರುವುದಕ್ಕೆ ಯಾವುದೇ ಬಿಲ್‌ಗಳು ಲಭ್ಯವಿರುವುದಿಲ್ಲ ಹಾಗೂ 14 ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾದ ಅನುದಾನ ರೂ.12,72,613/- ಗಳನ್ನು ಬಳಕೆ ಮಾಡಿರುವುದಿಲ್ಲ ಆದುದರಿಂದ ಈ ಎಲ್ಲಾ ಮೇಲ್ಕಂಡ ಕಾರಣಗಳಿಂದಾಗಿ ಮಂದೇವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಕಾನೂನಿನ್ವಯ ತಮ್ಮ ಕರ್ತವ್ಯ ನಿರ್ವಹಿಸದಿರುವುದರಿಂದ ಅವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43 (ಎ) ಮತ್ತು 48(4) ರನ್ವಯ ಕ್ರಮಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರ ಅಡಿಯಲ್ಲಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ದಿನಾಂಕ: 26.10.2016 ರಂದು ಜಾರಿ ಮಾಡಲಾಗಿರುತ್ತದೆ.

ಮುಂದುವರೆದು, ಮೇಲೆ ಓದಲಾದ (3) ರಲ್ಲಿ ಸದರಿಯವರು ದಿನಾಂಕ:14.11.2016 ರಂದು ಕಾರಣ ಕೇಳುವ ನೋಟಿಸ್ಸಿಗೆ ಉತ್ತರ ಸಲ್ಲಿಸಿರುತ್ತಾರೆ. ತಮ್ಮ ಲಿಖಿತ ಹೇಳಿಕೆಯಲ್ಲಿ ಅವರು 2015 ರ ಗ್ರಾಮ ಪಂಚಾಯಿತಿಯ ಮರು ವಿಂಗಡಣಾ ಸಂದರ್ಭದಲ್ಲಿ ಮಂದೇವಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಂದೇವಾಲ ತಾಂಡಾ (ಇಂದಿರಾ ನಗರ) ವನ್ನು ಅಧಿಕಾರಿಗಳ ತಪ್ಪಿನಿಂದಾಗಿ ಹರನಾಳ ಗ್ರಾಮ ಪಂಚಾಯಿತಿಯಲ್ಲಿ ಸೇರಿಸಿ ಚುನಾವಣೆ ನಡೆಸಿರುತ್ತಾರೆಂದು, ಚುನಾವಣೆ ನಂತರ ನ್ಯಾಯಾಲಯದ ಆದೇಶದಂತೆ ಮತ್ತೆ ಮಂದೇವಾಲ ತಾಂಡಾವನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿರವರ ತಿದ್ದುಪಡಿ ಆದೇಶ ಸಂ.ಕಂ ಚುನಾ:ಗ್ರಾಪಂ15-16 ದಿನಾಂಕ:10.09.2015 ರ ಮೂಲಕ ಮಂದೇವಾಲ ಗ್ರಾಮ ಪಂಚಾಯಿತಿಗೆ ಮರು ಸೇರ್ಪಡೆ ಮಾಡಿರುತ್ತಾರೆಂದು ಹಾಗೂ ಮಂದೇವಾಲ ತಾಂಡಾದ ಸದಸ್ಯರು ಹರನಾಳ ಗ್ರಾಮ ಪಂಚಾಯಿತಿಯ ಚುನಾವಣೆ ಮತ್ತು ಅಧ್ಯಕ್ಷರ ಆಯ್ಕೆಯ ಚುನಾವಣೆಯಲ್ಲಿ ಭಾಗವಹಿಸಿ, ಆನಂತರ ಮಂದೇವಾಲ ಗ್ರಾಮ ಪಂಚಾಯಿತಿಗೆ ಸೇರ್ಪಡೆ ಆಗಿದ್ದರ ವಿರುದ್ಧ ಮಂದೇವಾಲ ಗ್ರಾಮ ಪಂಚಾಯಿತಿಯ ಸರ್ವ ಸದಸ್ಯರು ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ ಡಬ್ಲ್ಯೂ ಪಿ.ನಂ205288 ರಿಂದ 205302 2015 (LB-RES) ರ ಮೂಲಕ ಜಿಲ್ಲಾಧಿಕಾರಿಯವರ ಆದೇಶಕ್ಕೆ ತಡೆಯಾಜ್ಞೆ ತರಲಾಯಿತೆಂದು ತಿಳಿಸಿರುತ್ತಾರೆ.

ದಿನಾಂಕ:30.06.2015 (ಗ್ರಾಮ ಪಂಚಾಯಿತಿ ಅಧ್ಯಕ್ಷರ ಆಯ್ಕೆ ಸಭೆ) ಮತ್ತು 30.07.2015 ರಂದು ಎರಡು ಸಾಮಾನ್ಯ ಸಭೆಗಳು ಜರುಗಿರುತ್ತವೆ ಹಾಗೂ ದಿನಾಂಕ:07.01.2016 ಮತ್ತು 18.03.2016 ರಂದು ಸಾಮಾನ್ಯ ಸಭೆ ಕರೆದಿದ್ದು, ಕೋರಂ ಅಭಾವದಿಂದ ಮುಂದೂಡಲಾಯಿತೆಂದು, 9 ಚೆಕ್‌ಗಳ ಮಾಹಿತಿಯು 2016-17 ನೇ ಸಾಲಿಗೆ ಮುಂದುವರೆದಿದ್ದು, ತನಿಖಾ ತಂಡ ಬಂದ ಸಂದರ್ಭದಲ್ಲಿ ತೋರಿಸದೆ ಉಳಿದಿರಬಹುದು, ರೂ.88,006/- ಮತ್ತು ರೂ.1,37,611/- ಗಳ ಮೊತ್ತಕ್ಕೆ ಕ್ರಿಯಾಯೋಜನೆ ತಯಾರಿಸಿ, ಅನುಮೋದನೆ ಪಡೆದು ಹಣ ಪಾವತಿಸಲಾಗಿದೆಂದು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಮತ್ತು ಬೇಸಿಗೆಯ ಬರಗಾಲ ಪರಿಸ್ಥಿತಿ ಇದ್ದುದರಿಂದ ತುರ್ತಾಗಿ ಕೆಲಸ ನಿರ್ವಹಿಸಬೇಕಾಗಿದ್ದು ಕೊಟೇಶನ್ ಕರೆಯಲು ಸಾಧ್ಯವಾಗಿರುವುದಿಲ್ಲ, ಇದರಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಆಗಲಿ ಅಥವಾ ಹಣದ ದುರುಪಯೋಗ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ನ್ಯಾಯಾಲಯದಲ್ಲಿ ದಾವೆ ಇದ್ದುದರಿಂದ ಬಿ.ಆರ್.ಜಿಎಫ್ ಹಣವನ್ನು ಖರ್ಚು ಮಾಡಲು ಸಾಧ್ಯವಾಗಿರುವುದಿಲ್ಲ, ಈಗ ಇದಕ್ಕೆ ಚಾಲನೆ ನೀಡಲಾಗಿದೆ. ನ್ಯಾಯಾಲಯದಲ್ಲಿ ದಾವೆ ಇದ್ದುದರಿಂದ 14 ನೇ ಹಣವನ್ನು ಕ್ರಿಯಾ ಯೋಜನೆಯನ್ನು ತಯಾರಿಸಿ ಹಣವನ್ನು ಖರ್ಚು ಮಾಡಲು ಸಾಧ್ಯವಾಗಿರುವುದಿಲ್ಲ, ಈಗ ಇದಕ್ಕೆ ಚಾಲನೆ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಅವರು ಅಧಿಕಾರಕ್ಕೆ ಬಂದು 16 ತಿಂಗಳು ಗತಿಸಿದ್ದು, ಇಲ್ಲಿಯವರೆಗೆ ಯಾರಿಂದಲೂ ದೂರು ಬಂದಿರುವುದಿಲ್ಲವೆಂದು, ಜನರ ಅಶೋತ್ತರಗಳಿಗೆ ಸ್ಪಂದಿಸಿ, ಸರ್ಕಾರದ ಯೋಜನೆ/ಕಾರ್ಯಕ್ರಮಗಳನ್ನು ಜನರ ಏಳಿಗಾಗಿ ಬಳಸುವ ಪ್ರಮಾಣಿಕ ಪ್ರಯತ್ನ ಮಾಡಬಯಸುವುದಾಗಿ ತಿಳಿಸುತ್ತಾ ಅವರ ಮೇಲಿನ ಆರೋಪಗಳನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಶ್ರೀ ಗೊಲ್ಲಾಳಪ್ಪ, ಅಧ್ಯಕ್ಷರು, ಮಂದೇವಾಲ ಗ್ರಾಮ ಪಂಚಾಯಿತಿ, ಜೇವರ್ಗಿ ತಾಲ್ಲೂಕು, ರವರಿಗೆ ವಿಚಾರಣೆಗೆ ಹಾಜರಾಗಲು ತಿಳಿವಳಿಕೆ ಪತ್ರ ನೀಡಲಾಗಿದ್ದು, ಸದರಿಯವರು ದಿನಾಂಕ:8.02.2017 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ಹಾಜರಿದ್ದು ತಮ್ಮ ಹೇಳಿಕೆ ನೀಡಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:18.02.2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ವರದಿ ಹಾಗೂ ಸದರಿಯವರು ನೀಡಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ ಸರ್ಕಾರವು ಈ ಪ್ರಕಣದಲ್ಲಿನ ವಾಸ್ತವಂಶಗಳನ್ನು ಅರಿತು, ಶ್ರೀ ಗೊಲ್ಲಾಳಪ್ಪ, ಅಧ್ಯಕ್ಷರು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕಾರ ವರ್ಷಕ್ಕೆ ಕನಿಷ್ಠ 12 ಸಭೆಗಳನ್ನು ನಡೆಸಬೇಕಾಗಿದ್ದು, ಸಕಾರಣವಿಲ್ಲದೆ ವರ್ಷಕ್ಕೆ ಕೇವಲ ಮೂರು ಸಭೆ ನಡೆಸಿದ್ದು, ಅದರಲ್ಲಿ ಒಂದು ಅಧ್ಯಕ್ಷರ ಆಯ್ಕೆ ಸಭೆ, ಒಂದು ಮುಂದೂಡಿದ ಸಭೆ ಹಾಗೂ ಕೇವಲ ಒಂದು ಸಾಮಾನ್ಯ ಸಭೆ ನಡೆಸಿ ಸದರಿಯವರು ಕರ್ತವ್ಯ ಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 48(4) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/892/ಗ್ರಾಪಂಅ/2016</u>**

**<u>ಬೆಂಗಳೂರು, ದಿನಾಂಕ:- 20-04-2017.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಗೊಲ್ಲಾಳಪ್ಪ, ಅಧ್ಯಕ್ಷರು, ಮಂದೇವಾಲ ಗ್ರಾಮ ಪಂಚಾಯಿತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರು ಸರ್ಕಾರದ ಮಾರ್ಗಸೂಚಿಯನ್ವಯ ವರ್ಷಕ್ಕೆ ಕನಿಷ್ಠ 12 ಸಾಮಾನ್ಯ ಸಭೆ ನಡೆಸುವಲ್ಲಿ, ಸಕಾರಣವಿಲ್ಲದೆ ಕೇವಲ ಮೂರು ಸಭೆ ನಡೆಸಿದ್ದು ಅದರಲ್ಲಿ ಒಂದು ಅಧ್ಯಕ್ಷರ ಆಯ್ಕೆ ಸಭೆ, ಒಂದು ಮುಂದೂಡಿದ ಸಭೆ ಹಾಗೂ ಕೇವಲ ಒಂದು ಸಾಮಾನ್ಯ ಸಭೆ ನಡೆಸಿ, ಕರ್ತವ್ಯ ಲೋಪವೆಸಗಿರುವುದರಿಂದ ಸದರಿಯವರನ್ನು ಮಂದೇವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನದಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 48(4) ಮತ್ತು ರನ್ವಯ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ.) ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ.
3. ಶ್ರೀ ಗೊಲ್ಲಾಳಪ್ಪ, ಅಧ್ಯಕ್ಷರು, ಮಂದೇವಾಲ ಗ್ರಾಮ ಪಂಚಾಯಿತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮಂದೇವಾಲ ಗ್ರಾಮ ಪಂಚಾಯಿತಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.